## ಕಳೆದ ಸಂಚಿಕೆಯಲ್ಲಿ



ಅದೊಂದು ಪುಟ್ಟ ಹಳ್ಳಿ. ಊರು ತನ್ನ ಎಲ್ಲೆಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋದಂತೆ ಊರ ಅಂಚಿನಲ್ಲಿದ್ದ ಕೇರಿಯೀಗ ಗ್ರಾಮದ ಮಧ್ಯಕ್ಕೆ ಬಂದಿದೆ. ಇದರಿಂದಾಗಿ, ಹತ್ತಾರು ಜಾತಿಗಳ ಜನರು ವಾಸಿಸುವ ಊರು ಕಾಲೊನಿಯನ್ನು ಮಧ್ಯದಲ್ಲಿಟ್ಟುಕೊಂಡು ಆದರ್ಶ ಗ್ರಾಮವೆನ್ನಿಸಿಕೊಂಡಿದೆ. ಜೀತಮುಕ್ತನಾದ ಶಿವಣ್ಣ ಕಾಲೊನಿಯಲ್ಲಿಯೇ ಅಂಗಡಿ ಇಟ್ಟುಕೊಂಡಿದ್ದಾನೆ. ಆ ಅಂಗಡಿಯಲ್ಲಿ ಎಲ್ಲ ಜಾತಿಯವರೂ ವ್ಯಾಪಾರ ಮಾಡುತ್ತಾರೆ. ಊರ ಬಾವಿಯ ಅಂಗಳದಲ್ಲಿ ಎಲ್ಲ ಜಾತಿಯ ಹೆಣ್ಣುಮಕ್ಕಳೂ ಸೇರುತ್ತಾರೆ. ಹೀಗೆಂದು, ಊರು ಜಾತಿಮುಕ್ತವಾಗಿದೆ ಎಂದರ್ಥವಲ್ಲ. ಜಾತಿಯ ಸರ್ಪ ಆಗಾಗ ಪೂತ್ಕರಿಸುತ್ತಲೇ ಇರುತ್ತದೆ. ಹೂವಿನ ರಾಜನಿಗೆ ಮೊದಲು ಕ್ಷೌರ ಮಾಡಿದ್ದರ ಬಗ್ಗೆ ಮಲ್ಲ ಕೋಪಗೊಳ್ಳುತ್ತಾನೆ. ಕಾಲೊನಿ ಜನರ ಬಗ್ಗೆ, ಬಡಬಗ್ಗರ ಬಗ್ಗೆ ಅವನಿಗೆ ತಾತ್ಸಾರ. ಜಾತಿಯ ಹಿರಿಮೆಯ ಜೊತೆಗೆ ದುಡ್ಡಿನ ದರ್ಪವೂ ಅವನೊಳಗೆ ಸೇರಿಕೊಂಡಿದೆ. ಮನುಷ್ಯರ ಸಣ್ಣತನಕ್ಕೆ ಪ್ರಾಣಿಗಳೇ ಸಂಕಟಪಡುತ್ತವೆ.

ಮುಳುಗುತ್ತಲೇ ಇತ್ತ ಮಲ್ಲನು ಈ ಬೋಸುಡಿ ಮಗನ್ನ ಇವತ್ತು ಬೆತ್ಲೆ ಮೆರವಣಿಗೆ ಮಾಡುಸ್ತೀನಿ ಎಂದುಕೊಂಡವನು ಒಂದೊಂದೇ ಮೆಟ್ಟಿಲು ಹತ್ತುತ್ತ ತ್ಯಾಗ ಬಿಚ್ಚಿ ಎಸೆದಿದ್ದ ಅಂಗಿ ಚಡ್ಡಿಯನ್ನು ಬಾರು ಕೋಲು ಕಡ್ಡಿಯಲ್ಲಿ ಎತ್ತಿಕೊಂಡು ಸರಸರನೆ ನಡೆದು ಅತ್ತ ಒಂದು ಬೇಲಿ ಸಂದಿಗೆ ಎಸೆದು ಹೋದ. ಇದರ ಯಾವ ಪರಿವೂ ಇಲ್ಲದೆ ತ್ಯಾಗ ನೀರಿನಲ್ಲಿ ಲೀಲಾಜಾಲವಾಗಿ ಈಜುತ್ತಿದ್ದ. ಅವನ ಬೆಳ್ಳನೆಯ ಪಾದಗಳು ನೀರಿನೊಳಗೆ ಕಂಡೂ ಕಾಣದಂತೆ ಗುರುತು ಮೂಡಿಸುತ್ತಾ ಅಳಿಸುತ್ತಾ ಇರುವಾಗಲೇ ನೀರೊಳಗೆ ಮರೆಯಾಗತೊಡಗಿದ.

* * *

ನೆತ್ತಿ ಸುಡುತ್ತಿತ್ತು. ಕಣದಲ್ಲಿ ಹುಳ್ಳಿ ಸಿಡಿದು ಚೆಲ್ಲುತ್ತಿದ್ದವು. ತಾನು ದಿನಕ್ಕಿಂತ ಒಂದು ಗಂಟೆ ಮುಂಚೆ ಬಂದದ್ದು ದ್ಯಾವಕ್ಕನಿಗೆ ಅರಿವಾಯಿತು. ಇತ್ತ ಮೂರು ತಾಸು ನಾಲ್ಕು ತಾಸಾದರೂ ಮಗನ ಸುಳಿವು ಇಲ್ಲದೆ ಹೋದುದನ್ನು ಗಮನಿಸಿದ ದ್ಯಾವಕ್ಕ ಏನೂ ಅರಿಯದ ಮಗ ತ್ಯಾಗನಿಗೆ ಕೈಯಾರೆ ಹೊಡೆದನಲ್ಲ ಎಂದು ಚಡಪಡಿಸಿದಳು. ಮಗನ ತಪ್ಪ ಹೊಟ್ಟೆಗಾಕಿಕೊಳ್ಳಲಿಲ್ಲ ಎಂಬ ಅರಿವಾಗಿ, ಹುಟ್ಟ ಸೀರೆ ಸೆರಗ ಬಾಯಿಗೆ ತುರುಕಿ ಹುಚ್ಚುಚ್ಚಾಗಿ ಒಬ್ಬಳೇ ಬಣವೆ ಮರೆಗೆ ನಿಂತು ಅತ್ತಳು.

ಮತ್ತೆ ಅಳು ಬಂದರೂ ವಿಶ್ವಾಸ ಆರಿಹೋಗಲಿಲ್ಲ. ಅಪ್ಪ ಸತ್ತ ಮಗನ ಬೆಳೆಸುವುದಷ್ಟೇ ತನ್ನ ಆದ್ಯತೆ ಎಂದು ಇವಳಿಗೆ ಗೊತ್ತಾಯಿತು. ಹೀಗಾಗಿ ದುಖ ತಡೆಯಿತು. ಬ್ರಹ್ಮ ಲಿಖಿತದ ಮುಂದೆ ಯಾರ ಆಟವೂ ನಡೆಯಲಾರದು, ಗಂಡನ ಸಾವು ಕರ್ಮ ಫಲದಂತೆ ವಿಧಿ ನಡೆಸುವ ಸತ್ವಪರೀಕ್ಷೆ ಎಂದು ಭಾವಿಸಿದಳು. ಇವಳು ಬದುಕನ್ನು ಪ್ರೀತಿಸುತ್ತಾಳೆ. ಕಣ್ಣುಗಳು ಅಗಲ ಪ್ರಖರಕ್ಕೆ ತೆಗೆದುಕೊಳ್ಳುತ್ತ 'ಹೇಳಲಾಗದ ಕಥೆ, ಹೇಳಲಾಗದ ವ್ಯಥೆ, ಸುಳ್ಳು ಸತ್ಯ ನಿಶ್ಶಬ್ದದಂತೆ ಅವಳ ಅಂತಃಕರಣ ಕರಗಿತು. ಮನಸ್ಸು ಹಣ್ಣಾಯಿತು. ಬೇಲಿಗೂ ಹೂ ಬೆರಳಿದೆ, ನೆಲಕೆ ಹರಯವು ಮರಳಲಿದೆ' ಎಂಬ ಅಂತರ್ವಾಣಿ ಕಿವಿಗೆ ಬಿದ್ದಂಗಾಗಿ ಎಚ್ಚರಾದಳು.

ಮನೆಯಿಂದ ಮನೆಗೆ ಬುಡುಬುಡುಕೆ ಆಡಿಸುತ್ತ ಬುಡುಬುಡುಕೆ ರಾಮಯ್ಯ:

'ನುಡಿತೈತೆ ತಾಯಿ ನುಡಿತೈತೆ<br>
ಹಾಲಕ್ಕಿ ನುಡಿತೈತೆ;<br>
ಒಬ್ಬ ತಾಯಿಗೆ ಒಬ್ಬ ಮಗ<br>
ಊರ ಮುಂದೆಯೇ ಹೋದೋನು<br>
ಬರೋ ಗೌರಿ ಅಮಾವಾಸ್ಯೆಗೆ<br>
ಹೆಣವಾಗಿ ಹೋಗುತ್ತಾನೆ<br>
ರಕ್ತದ ಕೋಡಿನೇ ಹರಿಯುತ್ತೆ ತಾಯಿ<br>
ರಕ್ತದ ಕೋಡಿನೇ ಹರಿಯುತ್ತೆ'

ಎನ್ನುತ್ತ ಮನೆಯಿಂದ ಮನೆಗೆ ಬುಡುಬುಡುಕೆ ಆಡಿಸುತ್ತಾ ಬಂದ.

ಕೆಂಚಜ್ಜನ ಹೆಂಡತಿ ಕರಿಯಮ್ಮ ಅಯ್ಯೋ ಮುಂದೋಗಪ್ಪ ಇದ್ದಾಗ ನಾವು ಕೊಟ್ಟಿಲ್ವ, ಇವಾಗಿಲ್ಲ ಹೋಗು ಎನ್ನುತ್ತಿದ್ದಂತೆ ಮುಂದಿನ ಮನೆಗೆ ಹಾಯ್ದು ಬರುತ್ತಾ:

'ನುಡಿತೈತೆ ತಾಯಿ ನುಡಿತೈತೆ<br>
ಹಾಲು ಹಣ್ಣಾಗಿ, ತೂಗೋ ತೊಟ್ಟಿಲಾಗಿ,<br>
ಮಕ್ಕಳು ಬಲವಾಗಿ<br>
ರೊಕ್ಕದ ದಿನವಾಗಿ<br>
ಹೋದಲ್ಲಿ ಬಂದಲ್ಲಿ<br>
ಕೈಕಾಲಿಗೊಂದು ಸುಖ ಕೊಟ್ಟು<br>
ಮಾಡೋ ಉದ್ಯೋಗದಲ್ಲಿ<br>
ಭಗವಂತ ಉದ್ದಾರ ಮಾಡಿ<br>
ಮುಯ್ಯ ಕೊಟ್ಟಂತ ಒಂದು ಕೈಗೆ<br>
ಶಿವ ಪಾರ್ವತಿ ಪರಮೇಶ್ವರ<br>
ಎರಡು ಕೈಯ್ಯಲ್ಲಿ ಕೊಟ್ಟು<br>
ಮಂತನ ಉದ್ದಾರ ಮಾಡಲಿ'

ಎಂದು ಬುಡುಬುಡುಕೆ ಆಡಿಸುತ್ತಿದ್ದ. ಭೀತಿಗೊಂಡ ದ್ಯಾವಕ್ಕಳ ಒಳ ಜೀವ ಚಿಟ್ಟನೆ ಚೀರಿ ಬೆಚ್ಚಿತ್ತು. ದ್ಯಾವಕ್ಕನ ಮನಸು 'ನನ್ಮಗ ತ್ಯಾಗನಿಗೆ ಏನಾದ್ರೂ...' ಎಂದುಕೊಳ್ಳುತ್ತಾ ಊರು ಮೂರು ಸುತ್ತು ಹುಡುಕಿ ಕಳವಳಿಸಿತು.

ಕಲ್ಯಾಣಿಯಿಂದ ಮೇಲೆದ್ದ ತ್ಯಾಗ ಅಂಗಿ ಚಡ್ಡಿ ತಡಕಾಡಿ ಅವು ಕೈಗೆ ಸಿಗದೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜನ ಯಾರೂ ಅಡ್ಡಾಡದ ಸಮಯ ನೋಡಿ ಓಡಿ ಬಂದು ಆ ಬೇಲಿ ಸಂದಿಯಿಂದ ಈ ಬೇಲಿ ಸಂದಿಗೆ ನೆಗೆಯುತ್ತಾ, ಸುತ್ತಮುತ್ತ ಗಮನಿಸುತ್ತಾ ಯಾರೂ ಇಲ್ಲದ್ದನ್ನು ನೋಡಿ ಓಡಿ ಬಂದೋನು ಗವಿರಂಗಣ್ಣೋರ ಬೇಲಿಯಲ್ಲಿ ಅವಿತು ಕೂತನು.

ಗವಿರಂಗಣ್ಣನ ಹೆಂಡತಿ ಸೀರೆ ಎತ್ತಿ ಇನ್ನೇನು ಕುಂತು ಹಿತ್ಲಬೇಲಿಗೆ ಉಚ್ಚೆ ಹುಯ್ಯಬೇಕು, ಅಷ್ಟೊತ್ತಿಗೆ ಬೇಲಿ ಸರಕ್ಕಂದಂಗಾಗಿ, ಅವಕ್ಕ ಯಂತದಾರ ಹುಳ ಇರಬೇಕಾ ಅಂತ ಎದ್ದು ಬಗ್ಗಿ ಬೇಲಿಯೊಳಗೆ ಕಣ್ಣಾಯಿಸಿತು. ಬೆತ್ಲಾಗಿ ಬೇಲಿಯೊಳಗೆ ಕುಂತ ತ್ಯಾಗನ್ನ ನೋಡಿ 'ಅಯ್ಯೋ ಅರಿವುಗೇಡಿ, ಇದ್ಯಾಕ್ಲಾ ಇಲ್ಲಿ ಕುಂತಿದಿಯಾ, ಎದ್ಬಾರ್ಲಾ ಆಚೆ, ಬೇಲೀಲಿ ಎಂತವಾರ ಕಚ್ಚಾವು' ಅಂತ ಗದರಿದಳು. ಆ ಧ್ವನಿ ಕೇಳಿದ ತ್ಯಾಗ ಹೆದರಿ, ಅಪಾಯ ಕಂಡಾಗ ಸುರುಳಿ ಸುತ್ತಿಕೊಳ್ಳುವ ಚಿಪ್ಪಂದಿಯಂತೆ ದೇಹವನ್ನು ಮುದುರಿಕೊಳ್ಳುತ್ತಾ, ಹಿಂದೆ ಹಿಂದೆ ಸರಿಯುತ್ತಾ ಬೇಲಿಯೊಳಗೆ ಮರೆಯಾದ. ಸುತ್ತಲಿನ ಹಿತ್ತಲು ಬೇಲಿ ಪೊದೆಗಳೆಲ್ಲವೂ ಗೊಳ್ಳೆಂದು ನಕ್ಕವು. ಇನ್ನೊಂದು ಬದಿಯಲ್ಲಿ ನಡೆದು ಹೋಗುತ್ತಿದ್ದ ತ್ಯಾಗನ ಅವ್ವ ಗವಿರಂಗಣ್ಣನ ಹೆಂಡತಿಯ ಮುಖ ಕಂಡು:

'ಅಕ್ಕ ನನ್ನ ಹುಡುಗನ್ನೇನಾದರೂ ಕಂಡ್ರ' ಎಂದು ಕೇಳಿದಳು. ಗವಿರಂಗಣ್ಣನ ಹೆಂಡತಿ ಕೈಸನ್ನೆ ಬಾಯ್ ಸನ್ನೆ ಮಾಡಿ ಬೇಲಿ ಮರೆಯಾಗಿ ಕುಳಿತಿರುವ ಸೂಚನೆ ಕೊಟ್ಟಳು. ಇವನವ್ವ ಬೇಲಿ ಮರೆಯಾಗೆ ಕಳ್ಳ ಹೆಜ್ಜೆಯಲ್ಲಿ ತನ್ನತ್ತಲೇ ಬರುವುದ ಅರಿತುಕೊಂಡ ತ್ಯಾಗನು ಬುದೂರನೆ ಎದ್ದು ಆ ಬೇಲಿಯಿಂದಾಚೆ ಆ ಬೇಲಿ, ಈ ಓಣಿ ನುಸುಳಿ ಓಟ ಕಿತ್ತನು. ತ್ಯಾಗನ ಅವ್ವ ಅವನು ಓಡಿದ ದಾರಿಯನ್ನೇ ಹಿಂಬಾಲಿಸಿದಳು. ಆ ಗೋಣಿ ಮರದ ದಿಕ್ಕಿನಿಂದ ಎಮ್ಮೆ ಅಟ್ಟಿಕೊಂಡು ಊರ ಒಳಗೆ ಬರುತ್ತಿದ್ದ ಆ ಕರಿಸಿದ್ದನ ಮನೆಯ ಆಳು ಶಿವರುದ್ರ 'ಅಕ್ಕ ಅದ್ಯಾಕೋ ನಿನ್ನೈದ ಬೆತ್ಲೆಲೇ ನಿನ್ನ ಮನೆಕಡಿಕೆ ಓಡಿದ' ಎಂದನು. 'ಅಯ್ಯೋ ಅದ್ಯಾಕೋ ನಾನು ಕಾಣೆ' ಅಂದವಳು, ಯಂಗಾದರೂ ಸರಿ ಮಗ ಮನೆಗೆ ಹೋದ ಸಮಾಧಾನದಲ್ಲಿ ನಿಟ್ಟುಸಿರು ಬಿಟ್ಟಳು.

* * *

ಬಸವ ಆಡ್ತಾ ಆಡ್ತಾ ಊರ ಹೊಲಗದ್ದೆಗಳಲ್ಲಿ ತಿಂದುಂಡು ಅಷ್ಟಿದ್ದಿದ್ದು ಇಷ್ಟಾಗಿ ಈಗ ಊರ ಬೀದಿಯಲ್ಲಿ ಓಡಾಡಿಕೊಂಡಿದೆ. ಬಸವ ಬರುವ ದಿಕ್ಕಿಗೆ ನಾಯಿಗಳು ಬೌ ಬೌ ಎಂದು ಬೊಗಳುತ್ತ ಆ ಬಸವನನ್ನು ಅಡ್ಡಗಟ್ಟಿ ಕಿವಿ ಕಿತ್ತೋಗುವಂತೆ ಬೊಗಳುತ್ತ, ಜಿಗಿಜಿಗಿದು ಕಚ್ಚುವಂತೆ ನುಗ್ಗಿ ಹೋಗುತ್ತಿದ್ದವು. ಈ ಬಸವ ತನ್ನ ರಕ್ಷಣೆಗೆ ಒಮ್ಮೆ ಬುಸ್ಸನೆ ಕೊಂಬಿನಲ್ಲಿ ತಿವಿಯುವಂತೆ ನುಗ್ಗಿ ಹೋದಾಗ ಈ ನಾಯಿಗಳು ಕಯ್ಯಯ್ಯೋ ಕಯ್ಯಯ್ಯೋ ಎನ್ನುತ್ತ ಅತ್ತೊಂದು ಇತ್ತೊಂದು ಸಂದಿಗೊಂದಿ ನುಗ್ಗಿ ಬಿದ್ದೆದ್ದು ಬೀದಿ ದೂಳೆಬ್ಬಿಸಿಕೊಂಡು ಓಡುತ್ತಿದ್ದವು. ಆ ಸದ್ದಿನ ಹಿಂದೆ ಕೂಗಾಡಿದ ರಾಮಕ್ಕನ ದನಿಗೆ ಹೆದರಿದ ಮಕ್ಕಳು ಮರಿಗಳನ್ನು ತಾಯಂದಿರು ಎತ್ತಿಕೊಂಡು ಮನೆಯೊಳಗೆ ಓಡಿಹೋಗಿ ಬಾಗಿಲು ಚಿಲಕ ಹಾಕಿ ಭದ್ರಪಡಿಸಿ 'ಅದರ ಸೊಲ್ಲಡ್ಗ' ಎಂದು ನಿಟ್ಟುಸಿರು ಬಿಡುತ್ತಿದ್ದರು. ಅದು ದೂರದಲ್ಲಿರುವಾಗಲೇ ರಾಮಕ್ಕ ಮನೆಯ ಮುಂದೆ ಒಣ ಹಾಕಿದ್ದ ಕಾಳುಕಡ್ಡಿಗಳನ್ನೆಲ್ಲ ಬಾಚಿಕೊಂಡು ಒಳಗೆ ಸುರಿಯುತ್ತ ನೆರಕೆ ಕದ